ಪಿ.ಡಬ್ಲ್ಯು:1

**ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 20.09.2024.**

**ಪಾಟೀ ಸವಾಲು : ಶ್ರೀ ಸಿ.ಎನ್. ಪ್ರತಿವಾದಿ ಪರ ವಕೀಲರಿಂದ**

ನಾನು ಸ.ನಂ.29/ಎ ವಿಸ್ತೀರ್ಣ 2 ಎಕರೆ 8 ಗುಂಟೆ ಸ್ವತ್ತಿನಲ್ಲಿ ವ್ಯವಸಾಯ ಮಾಡುತ್ತೇನೆ. ನಾನು ಎಸ್.ಎಸ್.ಎಲ್.ಸಿ. ವರೆಗೆ ವ್ಯಾಸಂಗ ಮಾಡಿದ್ದೇನೆ. ನಾನು ವಾದಪತ್ರದಲ್ಲಿ ಚೆಕ್ಕುಬಂದಿಯನ್ನು ತಪ್ಪಾಗಿ ನಮೂದಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಜಮೀನಿಗೆ ಉತ್ತರ ದಿಕ್ಕಿನಿಂದ ಪ್ರವೇಶಿಸಲು ದಾರಿ ಇದೆ ಎಂದರೆ ಸಾಕ್ಷಿಯು ಸರ್ಕಾರಿ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿ ಗಾಯಿತ್ರಮ್ಮ ರವರ ನಿವೇಶನದಲ್ಲಿ ಯಾವುದೇ ದಾರಿ ಇಲ್ಲ ಎಂದರೆ ಸರಿಯಲ್ಲ. ಜಮೀನಿನ ಕ್ರಯ ಪತ್ರದಲ್ಲಿ ಗಾಯಿತ್ರಮ್ಮ ರವರ ಸ್ವತ್ತಿನಲ್ಲಿ ದಾರಿ ಇದೆ ಎಂದು ಬರೆದಿದ್ದಾರೆ ಎಂದು ನುಡಿಯುತ್ತಾರೆ. ವಾದಪತ್ರದ ಜೊತೆಗೆ ಹಾಕಿರುವ ಕಚ್ಚಾ ನಕ್ಷೆಯು ನಾನು ತಯಾರಿಸಿದ್ದು ಎಂದರೆ ಸರಿ. ಸರ್ಕಾರಿ ದಾಖಲೆಗಳಲ್ಲಿ ಕಚ್ಚಾ ನಕ್ಷೆಯಲ್ಲಿ ತೋರಿಸಿರುವಂತೆ ದಾರಿ ಇರುವುದಿಲ್ಲ. ಎಂದು ನುಡಿಯುತ್ತಾರೆ. ಪ್ರತಿವಾದಿಗಳಿಗೆ ಕಿರುಕುಳ ನೀಡಲು ನಾನು ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಗೌರಿಬಿದನೂರು.